# ಅಪರೂಪದ ವ್ಯಕ್ತಿ

ಸ್ವಾಮಿ ಸುರೇಶಾನಂದ

*ಅಪರೂಪದ ವ್ಯಕ್ತಿಯ ಅಪೂರ್ವಸಂದೇಶ ನಮಗೆಲ್ಲರಿಗೂ ಅಪೇಕ್ಷಣೀಯವಾದುದು. ಈ ಮಾರ್ಮಿಕ ಕಥೆಯನ್ನು ನಿರೂಪಿಸಿರುವ ಸ್ವಾಮಿ ಸುರೇಶಾನಂದಜೀಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನಿವೃತ್ತ ಅಧ್ಯಕ್ಷರಾಗಿದ್ದು ಈಗ ಬಿಳಿರಂಗನ ಬೆಟ್ಟದಲ್ಲಿ, ಅಲ್ಲಿನ ಗಿರಿಜನರ ಸೇವೆಯಲ್ಲಿ ತೊಡಗಿದ್ದಾರೆ.*

ಒಂದು ಊರಿನಲ್ಲಿ ಒಬ್ಬ ವಿಚಿತ್ರ ವ್ಯಕ್ತಿಯಿದ್ದ. ಅವನು ಸಾಮಾನ್ಯ ಉಡುಪನ್ನು ಧರಿಸಿ, ಗಡ್ಡಬಿಟ್ಟುಕೊಂಡಿರುತ್ತಿದ್ದ. ಅವನವರಾರೂ ಇದ್ದಂತೆ ಕಂಡು ಬರುತ್ತಿರಲಿಲ್ಲ. ಅವನ ಕೆಲಸ? ಪ್ರತಿದಿನ ಒಂದು ದೊಡ್ಡ ಕಲ್ಲನ್ನು ಕಷ್ಟಪಟ್ಟು, ಬೆವರು ಸುರಿಸಿ ಸಮೀಪದ ಬಂಡೆಯ ತುದಿಗೆ ದೂಡಿಕೊಂಡು ಹೋಗುವುದು. ಅನಂತರ ಹಿಂದೆ ತಿರುಗಿ ಆ ದೊಡ್ಡ ಕಲ್ಲನ್ನು ಬಂಡೆಯ ತುದಿಯಿಂದ ಕೆಳಕ್ಕೆ ದೂಡುವುದು. ಕಲ್ಲು ಸದ್ದುಮಾಡುತ್ತಾ ಕೆಳಗುರುಳುವಾಗ ಕೈ ಚಪ್ಪಾಳೆ ತಟ್ಟಿ ಹಹ್ಹ.. ಎಂದು ಹೊಟ್ಟೆತುಂಬ ನಗುವುದು. ಅನಂತರ ಕೆಳಗಿಳಿದು ತನ್ನ ಏಕೈಕ ಸ್ವತ್ತಾದ ಭಿಕ್ಷಾಪಾತ್ರೆಯನ್ನು ಹಿಡಿದು ಮನೆಮನೆಗೆ ಭಿಕ್ಷೆ ಬೇಡಲು ಹೋಗುತ್ತಿದ್ದ. ಕೊನೆಯ ಮನೆಯ ಹತ್ತಿರ ಒಂದು ಒಲೆಯನ್ನು ಹೂಡಿ ಆ ಭಿಕ್ಷಾಪಾತ್ರೆಯಲ್ಲೇ ಅನ್ನ ಬೇಯಿಸಿ ತಿನ್ನುತ್ತಿದ್ದ. ಅಂದು ಅಲ್ಲೇ ಮಲಗಿ ನಿದ್ರೆ ಮಾಡುತ್ತಿದ್ದ. ಮರುದಿನ ಮತ್ತೆ ಅದೇ ಕೆಲಸ. ಕಲ್ಲನ್ನು ಬಂಡೆಯ ತುದಿಗೆ ತಳ್ಳಿಕೊಂಡು ಹೋಗಿ ಉರುಳಿಸುವುದು ಅನಂತರ ಭಿಕ್ಷೆ, ಊಟಮಾಡುವುದು.

ಒಂದು ದಿನ ಭಿಕ್ಷೆಯ ಕೊನೆಯ ಹಂತವನ್ನು ಮುಗಿಸಿ ಇನ್ನೇನು ಒಲೆ ಹಚ್ಚಬೇಕು ಎನ್ನುವಷ್ಟರಲ್ಲಿ, ತೀರ ಸಮೀಪದ ಶ್ಮಶಾನಭೂಮಿಯಲ್ಲಿ ಧಗಧಗನೆ ಉರಿಯುತ್ತಿದ್ದ ಚಿತಾ ಬೆಂಕಿಯನ್ನು ನೋಡಿ ಅಲ್ಲೇ ತನ್ನ ಅನ್ನವನ್ನು ಬೇಯಿಸಲು ಹೊರಟ. ಪಾತ್ರೆಯನ್ನು ಹೆಣ ಸುಡುತ್ತಿದ್ದ ಬೆಂಕಿಯ ಮೇಲೆ ಇರಿಸಿದ. ಅವನಿಗೆ ಅಂದು ತುಂಬ ದಣಿವಾಗಿತ್ತು, ಅಲ್ಲೇ ಮಲಗಿ ನಿದ್ದೆ ಮಾಡಿಬಿಟ್ಟ. ಬಹಳ ಹೊತ್ತಾದರೂ ಎಚ್ಚರವಾಗಲಿಲ್ಲ.

ಈಗ ನಡುರಾತ್ರಿ. ಶ್ಮಶಾನ ಕಾಳಿ ತನ್ನ ಸಂಗಡಿಗರಾದ ಶಾಕಿನಿ ಡಾಕಿನಿ ಮುಂತಾದವರೊಂದಿಗೆ ನಿತ್ಯನರ್ತನಕ್ಕಾಗಿ ಆ ಶ್ಮಶಾನಕ್ಕೆ ಬಂದಳು. ಈ ನರಪಿಳ್ಳೆಯನ್ನು ನೋಡಿ ಆಕೆಗೆ ಆಶ್ಚರ್ಯವಾಯಿತು. ಎಬ್ಬಿಸಿ ಓಡಿಸುವಂತೆ ಸಂಗಾತಿಗಳಿಗೆ ಹೇಳಿದಳು. ಆತನನ್ನು ಎಚ್ಚರಿಸಿ, "ನೀನು ಇಲ್ಲಿಂದ ಈಗಲೇ ಹೋಗಬೇಕು. ನಾವು ನಮ್ಮ ನಿತ್ಯದ ನರ್ತನ ಮಾಡಬೇಕು" ಎಂದು ಹೇಳಿದಾಗ, "ನಾನು ಹೋಗಲಾರೆ. ನನಗೆ ತುಂಬ ಹಸಿವಾಗಿದೆ. ನಾನು ಊಟ ಮಾಡಬೇಕು" ಎಂದ. ಎಷ್ಟು ಹೇಳಿದರೂ, "ನನಗೆ ತೊಂದರೆ ಕೊಡಬೇಡಿ, ನಾನು ಊಟಮಾಡಬೇಕು" ಎಂದ. ಶಾಕಿನಿ ಡಾಕಿನಿಯರು ತಮ್ಮ ಕರ್ಕಶ ಧ್ವನಿಯಿಂದ ಹಾಹ್ಹಾ, ಹುಹ್ಹೂ ಎಂದು ಅವನನ್ನು ಹೆದರಿಸಿ ಓಡಿಸುವ ಪ್ರಯತ್ನವೂ ಸಫಲವಾಗಲಿಲ್ಲ. ಆ ಆಸಾಮಿ ಅಲ್ಲಿಂದ ಕದಲಲೇ ಇಲ್ಲ.

ನೃತ್ಯ ಮೊದಲಾಯಿತು, ಕೊನೆಗೊಂಡಿತು. "ಆಯಿತೆ ನಿಮ್ಮ ನೃತ್ಯ? ಈಗಲಾದರೂ ನೀವು ಇಲ್ಲಿಂದ ಹೊರಡಿ. ನನಗೆ ಹಸಿವಾಗಿದೆ. ನಾನು ಊಟಮಾಡಬೇಕು" ಎಂದ. ಇನ್ನೇನು ಹೊರಡಬೇಕು. ಆಗ ಶ್ಮಶಾನ ಕಾಳಿಗೆ ಒಂದು ಹಂಬಲ ಹುಟ್ಟಿತು. "ಈತ ವಿಚಿತ್ರ ವ್ಯಕ್ತಿ. ನಮ್ಮ ಬೆದರಿಕೆಗೆ ಜಗ್ಗಲಿಲ್ಲ, ನಮ್ಮ ನೃತ್ಯವನ್ನು ನೋಡಿ ಖುಷಿಪಡಲೂ ಇಲ್ಲ. ಈತನಿಗೇನಾದರೂ ವರ ಕೊಡಬೇಕು"—ಎಂದು ಕಾಳಿಗೆ ಅನಿಸಿತು. ಅವಳು ಆತನನ್ನು ಸಮೀಪಿಸಿ, "ನಿನಗೆ ನಾನು ಏನಾದರೂ ಕೊಡಬೇಕು ಎಂದೆನಿಸುತ್ತಿದೆ. ನಿನಗೆ ಏನು ಬೇಕು, ಕೇಳು, ಕೊಡುತ್ತೇನೆ" ಎಂದಳು. "ನನಗೇನೂ ಬೇಕಾಗಿಲ್ಲ. ನನಗೆ ಹಸಿವಾಗಿದೆ, ಊಟಮಾಡಬೇಕು. ನೀನು ಇಲ್ಲಿಂದ ಹೋದರೆ ಸಾಕು" ಎಂದ.

ಆಕೆ ಮಹಾತಾಯಿಯಲ್ಲವೆ? "ಏನಾದರೂ ವರ ಕೊಟ್ಟೇ ನಾನು ಹೋಗುವುದು" ಎಂದು ಪಟ್ಟು ಹಿಡಿದಳು. ಅನಿವಾರ್ಯವಾಗಿ ಆತ, "ನಾನು ಸಾಯುವುದು ಯಾವತ್ತು ಎಂದು ಹೇಳಬಲ್ಲೆಯಾ?" ಎಂದು ಕೇಳಿದ. ಕಾಳಿ ಸ್ವಲ್ಪ ಯೋಚಿಸಿ ಸರಿಯಾದ ತಾರೀಖು ಮತ್ತು ಮುಹೂರ್ತಗಳನ್ನು ತಿಳಿಸಿದಳು. "ನೀವಿನ್ನು ಹೋಗಬಹುದು" ಎಂದನಾತ. "ಅದು ವರವಲ್ಲ, ಬರಿಯ ತಿಳುವಳಿಕೆ. ಬೇರೇನಾದರೂ ಕೇಳು" ಎಂದಳು. "ಹಾಗಾದರೆ ನನ್ನ ಸಾವನ್ನು ಒಂದು ದಿನದ ಮಟ್ಟಿಗೆ ಮುಂದೂಡು" ಎಂದನು. "ಅದು ಆಗದ ಮಾತು. ಮತ್ತೇನ್ನಾದರೂ ಕೇಳು" ಎಂದಳು ಕಾಳಿ. "ಹೋಗಲಿ, ಆ ಸಾವನ್ನು ಒಂದು ದಿನ ಹಿಂದಕ್ಕೆ ಹಾಕಿಬಿಡು" ಎಂದನು. ಕಾಳಿಗೆ ಅದೂ ಸಾಧ್ಯವಾಗಲಿಲ್ಲ. "ನನಗಿನ್ನೇನೂ ಬೇಕಾಗಿಲ್ಲ. ದಯವಿಟ್ಟು ನೀನು ಹೋಗಿ ನನ್ನನ್ನು ಊಟ ಮಾಡುವುದಕ್ಕೆ ಬಿಡು," ಎಂದು ಅವನು ಕೇಳಿಕೊಂಡನು. ಕಾಳಿ ಬಿಡಬೇಕಲ್ಲ! ಮತ್ತೆ ಒತ್ತಾಯಿಸಿದಳು. ಆತನ ಎಡಗಾಲು ತುಂಬ ದಿನಗಳಿಂದ ಊದಿಕೊಂಡಿತ್ತು. "ಈ ಊತವನ್ನು ಬಲಗಾಲಿಗೆ ವರ್ಗಾಯಿಸು" ಎಂದನು. "ಹಾಗೇ ಆಗಲಿ" ಎಂದಳು ಕಾಳಿ. "ಇನ್ನೇನಾದರೂ ಕೇಳು" ಎಂದು ಮತ್ತೆ ಪೀಡಿಸಿದಳು. "ಈ ನೋವು ಮತ್ತು ಊತವನ್ನು ಮತ್ತೆ ಎಡಗಾಲಿಗೆ ವರ್ಗಾಯಿಸು" ಎಂದ. ಅದೂ ಆಯಿತು. ಆದರೂ

ಅವಳು ಹೊರಡುತ್ತಲೇ ಇಲ್ಲ. "ಮತ್ತೇನಾದರೂ ಕೇಳು" ಎಂದು ಗೋಗರೆದಳು. "ನನಗೇನೂ ಬೇಡ. ನನಗೆ ಹಸಿವಾಗಿದೆ. ಊಟ ಮಾಡಬೇಕು, ತೊಂದರೆ ಕೊಡಬೇಡ. ದಯವಿಟ್ಟು ಹೋಗು" ಎಂದನು. ಈ ವ್ಯಕ್ತಿಯ ವೈಚಿತ್ರ್ಯವನ್ನು ಅರ್ಥಮಾಡಿಕೊಳ್ಳ ಲಾರದೆ ಜಗನ್ಮಾತೆಯಾದ ಕಾಳಿಯು ನಸುಬೆಳಕಾಗುವ ಮುನ್ನ ಕಣ್ಮರೆಯಾದಳು.

ಜೀವನದಲ್ಲಿ ಏನೇನೊ ಸಾಧಿಸಬೇಕು, ಮಹಾ ಪಂಡಿತ ನಾಗಬೇಕು, ಉನ್ನತ ಅಧಿಕಾರ ಪಡೆಯಬೇಕು, ಅಪಾರ ಸಂಪತ್ತನ್ನು ಗಳಿಸಬೇಕು—ಹೀಗೆ ಅನೇಕಾನೇಕ ಆಸೆ ಆಕಾಂಕ್ಷೆ ಗಳನ್ನು ಇಟ್ಟುಕೊಂಡು ಜನರು ಜೀವನಯಾಪನೆ ಮಾಡುತ್ತಾರೆ. ಉನ್ನತ ಆಧ್ಯಾತ್ಮಿಕ ದೃಷ್ಟಿಯಿಂದ ಇವೆಲ್ಲವೂ ವ್ಯರ್ಥವೇ—ಆ ವಿಚಿತ್ರವ್ಯಕ್ತಿಯು ಕಲ್ಲನ್ನು ಉರುಳಿಸಿಕೊಂಡು ಹೋದಂತೆಯೇ. ಆ ವ್ಯಕ್ತಿಯಂತೆ ಅಲ್ಪದರಲ್ಲೇ ತೃಪ್ತಿಯಿಂದಿರಲು ಸಾಧ್ಯವಾದರೆ ಇವೆಲ್ಲದರ ಆವಶ್ಯಕತೆ ಏನಿದೆ? ಮನುಷ್ಯನು ತನ್ನ ಅಹಂಕಾರದ ಕೊರತೆಯನ್ನು ನೀಗಿಸಲು ಏನೇನೊ ಸಾಧಿಸಲು ಹಂಬಲಿಸುತ್ತಾನೆ. ಆದರೆ ಕೊನೆಯಲ್ಲಿ ಶೂನ್ಯತೆಯಿಂದ ನರಳುತ್ತಾನೆ, ಏಕೆಂದರೆ ಈ ಅಹಂಕಾರದ ಹಸಿವೆಯನ್ನು ನೀಗಿಸಲಾಗುವುದಿಲ್ಲ—ಅದು ಬಕಾಸುರನಂತೆ. ಅದನ್ನು ಆಧ್ಯಾತ್ಮಿಕ ಭೀಮಶಕ್ತಿಯಿಂದ ಮರ್ದಿ ಸಬೇಕು. ಆಗ ನಿಜವಾದ ಸಂತೃಪ್ತಿ. ಆಗ ದೇವತೆಯೇ ಬಂದು ವರ ನೀಡುತ್ತೇನೆಂದರೂ ನಾವು ಆಸೆಪಡುವುದಿಲ್ಲ. ಏಕೆಂದರೆ ಸಂತೃಪ್ತಿಗಿಂತ ಶ್ರೇಷ್ಠವಾದ ವರ ಬೇರೊಂದಿಲ್ಲ.

**ಸಂತೋಷಾಮೃತತೃಪ್ತಾನಾಂ ಯತ್ಸುಖಂ ಶಾಂತಚೇತಸಾಮ್।**
**ಕುತಸ್ತದ್ಧನಲುಬ್ಧಾನಾಂ ಇತಶ್ಚೇತಶ್ಚ ಧಾವತಾಮ್॥**

"ಸಂತೋಷವೆಂಬ ಅಮೃತದಿಂದ ತೃಪ್ತರಾದ ಶಾಂತಮನಸ್ಕರಿಗೆ ಯಾವ ಸುಖವು ದೊರೆಯುತ್ತದೆಯೊ ಅಂತಹ ಸುಖ ಧನ ಲೋಭದಿಂದ ಚಂಚಲರಾಗಿ ಅಲ್ಲಿಂದಿಲ್ಲಿಗೆ ಸುತ್ತಾಡುವವರಿಗೆ ಹೇಗೆ ಲಭಿಸೀತು?"

# ಶ್ರೇಷ್ಠ ವರ

ಒಂದು ದೇವಾಲಯದಲ್ಲಿ ಭಕ್ತನೊಬ್ಬನು ಪ್ರತಿನಿತ್ಯ ಪ್ರಾರ್ಥಿಸುತ್ತಿದ್ದನು. ಅವನು ಯಾವಾಗಲೂ ಭಗವಂತನನ್ನು ನಾನಾ ವಸ್ತುಗಳಿಗಾಗಿ ಬೇಡುತ್ತಿದ್ದ. ಅವನಿಗೆ ಎಷ್ಟೇ ದೊರಕಿದರೂ 'ಮತ್ತಷ್ಟು ಬೇಕೆಂಬಾಸೆ.' ದೇವರಿಗೂ ಅವನ ಬೇಡಿಕೆಗಳನ್ನು ಕೇಳಿ ಬೇಸರವಾಗಿ ಹೋಗಿತ್ತು. ಒಂದು ದಿನ ದೇವರು ಅವನಿಗೆ ತಿಳಿಸಿದ : "ನೋಡಪ್ಪ. ನಾನು ನಿನಗೆ ಮೂರು ವರಗಳನ್ನು ಕರುಣಿಸುತ್ತೇನೆ. ಆ ಮೂರರಲ್ಲಿ ನಿನಗೆ ಬೇಕಾದುದೆಲ್ಲವನ್ನು ಕೇಳಿ ಮುಗಿಸಿಬಿಡು. ಮತ್ತೆ ನನ್ನನ್ನು ಪೀಡಿಸಬಾರದು."

ಭಕ್ತನಿಗೆ ದೇವರ ಮಾತನ್ನು ಕೇಳಿ ಮಹದಾನಂದ ವಾಯಿತು. ಮೂರು ವರ ಏನು ಕೇಳಬೇಕೆಂದು ಅವನು ಯೋಚಿಸತೊಡಗಿದ. ಯೋಚಿಸಿದಷ್ಟೂ ಅವನ ಚಿಂತೆ ಜಾಸ್ತಿ ಯಾಗತೊಡಗಿತು. ನಾಳೆ ಬಂದು ತಿಳಿಸುತ್ತೇನೆಂದು ಭಾವಿಸಿ ಮನೆಗೆ ಹಿಂತಿರುಗಿದ. ಮೂರು ವರ ಏನು ಕೇಳಬೇಕೆಂಬ ಪ್ರಶ್ನೆಯೇ ಅವನ ಇಡೀ ಮನಸ್ಸನ್ನು ಆವರಿಸಿಕೊಂಡುಬಿಟ್ಟಿತು. ಈ ಯೋಚನೆಯ ತೀವ್ರತೆ ಮನೆಯಲ್ಲಿ ಅನೇಕ ಗೊಂದಲಗಳಿಗೆ ಕಾರಣವಾಯಿತು. ಸಣ್ಣ ಸಣ್ಣ ವಿಷಯ ಗಳಿಗೂ ಅವನು ಸಿಡಿಮಿಡಿಗೊಳ್ಳತೊಡಗಿದ. ಇದರ ಪರಿಣಾಮವಾಗಿ ಪತ್ನಿಯೊಡನೆ ಅಂದು ಜೋರಾಗಿ ಜಗಳವೂ ಆಯಿತು.

ಮರುದಿನ ಬೆಳಗ್ಗೆ ದೇವಾಲಯಕ್ಕೆ ಪ್ರಾರ್ಥನೆಗಾಗಿ ಬಂದನು. ಭಗವದ್ವಾಣಿ ಕೇಳಿಸಿತು, "ಮೊದಲನೆಯ ವರ ಕೇಳು" ಎಂದು. ಹಿಂದಿನ ದಿನ ಪತ್ನಿಯೊಡನಾದ ಜಗಳದ ಕಹಿ ಭಕ್ತನ ಮನಸ್ಸಿನಲ್ಲಿ ಇನ್ನೂ ಹಸಿರಾಗಿತ್ತು. ಭಕ್ತನು ಕೇಳಿದ: "ದೇವರೆ, ಕರುಣಾಮಯನೆ, ನನ್ನ ಪತ್ನಿ ತೀರಿಹೋಗಲಿ. ಇದೇ ನನ್ನ ಮೊದಲನೆಯ ವರ." ಆಯಿತು. ಅಂದು ಮನೆಗೆ ಹೋಗಿ ನೋಡುತ್ತಾನೆ ಪತ್ನಿ ಸತ್ತುಬಿದ್ದಿದ್ದಳು. ನೆರೆಹೊರೆಯವರೆಲ್ಲ ಬಂದು ಗೋಳೋ ಎಂದು ಅಳುತ್ತಿದ್ದರು. 'ಇಂಥ ಒಳ್ಳೆಯ ಹೆಂಗಸು ಸತ್ತುಹೋದಳಲ್ಲ. ಏನಾಗಿತ್ತೊ ಏನೊ! ಅಯ್ಯೋ ಪಾಪ!" ಎಂದು ಎಲ್ಲರೂ ಅವಳ ಗುಣಗಾನ ಮಾಡುವವರೇ. ಈ ದೃಶ್ಯವನ್ನೆಲ್ಲ ನೋಡಿ ಭಕ್ತನ ಎದೆ ಕರಗಿತು. ಅವನು ದೇವಾಲಯಕ್ಕೆ ಹೋಗಿ ಮತ್ತೆ ಪ್ರಾರ್ಥಿಸತೊಡಗಿದ. ಭಗವದ್ವಾಣಿ ಕೇಳಿಸಿತು: "ನಿನ್ನ ಎರಡನೆಯ ವರ ಯಾವುದು?" ಭಕ್ತನು ಕೂಡಲೆ ಕೇಳಿದ, "ನನ್ನ ಪತ್ನಿ ಪುನಃ ಬದುಕಲಿ" ಎಂದು.

ಮನೆಗೆ ಹೋಗಿ ನೋಡಿದಾಗ ಪತ್ನಿ ಜೀವತಳೆದು ನಿಂತಿದ್ದಳು. ಎಲ್ಲರಿಗೂ ಆನಂದವೊ ಆನಂದ. ಆದರೆ ಭಕ್ತನಿಗೆ ಮಾತ್ರ ಎಲ್ಲಿಲ್ಲದ ಚಿಂತೆ—ಮೂರನೆ ವರ ಏನು ಕೇಳಬೇಕು ಎಂದು. ಎಷ್ಟೇ ಆಲೋಚಿಸಿದರೂ ಹೊಳೆಯುತ್ತಲೇ ಇಲ್ಲ. ಇದೇ ಯೋಚನೆಯಲ್ಲಿಯೇ ಇಡೀ ರಾತ್ರಿ ಜಾಗರಣೆ ಮಾಡಿದ. ಮರುದಿನ ಬೆಳಿಗ್ಗೆ ದೇವಾಲಯಕ್ಕೆ ಬಂದ. "ಮೂರನೆಯ ವರ ಏನು?" ಎಂದು ದೇವರು ಪ್ರಶ್ನಿಸಿದ. ಭಕ್ತನು ದೈನ್ಯದಿಂದ ಹೇಳಿದ: "ದೇವರೆ, ನನಗೆ ಏನೂ ಹೊಳೆಯುತ್ತಲೇ ಇಲ್ಲ. ನೀನೇ ಹೇಳು, ಏನು ವರ ಕೇಳಲಿ ಎಂದು." ದೇವರು ಹೇಳಿದ: "ಎಲ್ಲಕ್ಕಿಂತ ಶ್ರೇಷ್ಠವಾದ ಒಂದು ವರ ಇದೆ. ಅದನ್ನು ಕೇಳು. ಅದೇನೆಂದರೆ ಸಂತೃಪ್ತಿ."